ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

ಸಂಖ್ಯೆ: ಮುಇ(ವಿ)/ಬೆಂಮಕ್ಷೇವ/ಅಇ/ಸಕಾಇ-4/148/
ಕಡತ: 1248-52

ಮುಖ್ಯ ಇಂಜಿನಿಯರ್(ವಿ) ರವರ ಕಛೇರಿ,
(ವಾಣಿಜ್ಯ, ಕಾರ್ಯ ಮತ್ತು ಪಾಲನೆ)
ಬೆಂಗಳೂರು ಮಹಾನಗರಕ್ಷೇತ್ರ ವಲಯ
ನಂ.14/3,3ನೇ ಮಹಡಿ, ಮಹರ್ಷಿಅರವಿಂದ
ಭವನ, ಬೆಂಗಳೂರು-560 001.
31-5-16

ಗೆ,

ಮೆ॥ ಗೋದ್ರೇಜ್ ಹೋಮ್ಸ್ ಕನ್‌ಸ್ಟ್ರಕ್ಷನ್ಸ್ ಪ್ರೈ ಲಿ.,
ಮಲ್ಲಸಂದ್ರ ಗ್ರಾಮ ಸ.ನಂ. 18/1ಎ1, 18/1ಎ13 & 22,
ಉತ್ತರಹಳ್ಳಿ ಹೋಬಳಿ, ಬೆಂಗಳೂರು.

ಮಾನ್ಯರೇ,

**ವಿಷಯ:-** ಹೆಚ್.ಎಸ್.ಆರ್. ವಿಭಾಗದ ಎಸ್-12 ಉಪವಿಭಾಗ ವ್ಯಾಪ್ತಿಯ ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸ.ನಂ. 18/1ಎ1, 18/1ಎ13 ಮತ್ತು 22 ರಲ್ಲಿ ಮೆ॥ ಗೋದ್ರೇಜ್ ಹೋಮ್ಸ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರವರು ನಿರ್ಮಿಸಲುದ್ದೇಶಿಸಿರುವ ಬಹುಮಹಡಿ ವಸತಿ ಕಟಡಕ್ಕೆ ಒಟ್ಟು 3950 ಕೆವಿಎ (3358 ಕಿ.ವ್ಯಾ) ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡಲು ಅನುಮೋದನೆ ಕುರಿತು.

**ಉಲ್ಲೇಖ:-** ಪತ್ರ ಸಂ: ಮುಪ್ರವ್ಯ/ಬಿಸಿ-18/ಕ-533(133)/15-16/4214/28.05.2016.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೆಚ್.ಎಸ್.ಆರ್. ವಿಭಾಗದ ಎಸ್-12 ಉಪವಿಭಾಗ ವ್ಯಾಪ್ತಿಯ ಉತ್ತರಹಳ್ಳಿ ಹೋಬಳಿ, ಮಲ್ಲಸಂದ್ರ ಗ್ರಾಮದ ಸ.ನಂ. 18/1ಎ1, 18/1ಎ13 ಮತ್ತು 22 ರಲ್ಲಿ ಮೆ॥ ಗೋದ್ರೇಜ್ ಹೋಮ್ಸ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ರವರು ನಿರ್ಮಿಸಲುದ್ದೇಶಿಸಿರುವ ಬಹುಮಹಡಿ ವಸತಿ ಕಟಡಕ್ಕೆ ಒಟ್ಟು 3950 ಕೆವಿಎ (3358 ಕಿ.ವ್ಯಾ) ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡಲು ಉಲ್ಲೇಖ (1)ರ ನಿಗಮ ಕಛೇರಿ ಪತ್ರದಲ್ಲಿ ನೀಡಿರುವ ಅನುಮೋದನೆಯನ್ವಯ ಕೆಳಕಂಡ ನಿಬಂಧನೆಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

1. ನೀವು ಒಟ್ಟು 3950 ಕೆವಿಎ (3358 ಕಿ.ವ್ಯಾ) ವಿದ್ಯುತ್ ಸಂಪರ್ಕ ಪಡೆಯುವ ಸಂಬಂಧ, ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11 ಕೆ.ವಿ. ಅಂಜನಾಪುರ ವಿದ್ಯುತ್ ಉಪಕೇಂದ್ರದಲ್ಲಿ ನೂತನ 11 ಕೆವಿ. ಬ್ರೇಕರ್ (SCADA compatible) ಅನ್ನು ಅಳವಡಿಸಿ, ಅದಕ್ಕೆ ಅಗತ್ಯವಿರುವ ಪ್ಲಾಟ್ ಫಾರ್ಂ ಮತ್ತು ಚಾವಣಿಯನ್ನು ವಿಸ್ತರಿಸಿಕೊಳ್ಳುವುದು. ಅಲ್ಲಿಂದ ಮುಂದಕ್ಕೆ, ನೂತನ 11 ಕೆ.ವಿ. ಮಾರ್ಗವನ್ನು 3*400 ಚ.ಮಿ.ಮೀ. ಹೆಚ್.ಟಿ ಭೂಗತ ಕೇಬಲ್‌ನೊಂದಿಗೆ ತಮ್ಮ ಆವರಣದವರೆಗೆ ಸುಮಾರು 2.7 ಕಿ.ಮೀ.ಗಳಷ್ಟು ದೂರ ವಿಸ್ತರಿಸಿಕೊಳ್ಳುವುದು.
2. ಸದರಿ ನಿರಾಕ್ಷೇಪಣಾ ಪತ್ರದ ಸಿಂಧುತ್ವದ ಅವಧಿಯು ಅನುಮೋದನೆ ನೀಡಿದ ದಿನದಿಂದ 2 ವರ್ಷಗಳಿಗೆ ಮಾತ್ರ ಸೀಮಿತವಾಗಿದ್ದು, ವಿದ್ಯುತ್ ಸರಬರಾಜು ಮಾಡಲು ಮಂಜೂರಾತಿ ನೀಡುವ ಅವಧಿಯಲ್ಲಿ ನಿಯತ ವಿದ್ಯುತ್ ಸರಬರಾಜು ವ್ಯವಸ್ಥೆ ಕುರಿತು ಪರಿಶೀಲಿಸಲಾಗುವುದು.
3. ಭವಿಷ್ಯದಲ್ಲಿ ನಿಮ್ಮ ಕೋರಿಕೆಯು 7500 ಕೆ.ವಿ.ಎ. ಮೀರಿದಲ್ಲಿ ತಮ್ಮ ಆವರಣದಲ್ಲಿ ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಿಕೊಳ್ಳುವುದು.
4. ಈ ನಿರಾಕ್ಷೇಪಣಾ ಪತ್ರದಿಂದ ಬರುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.
5. ನಿಮ್ಮ ಆವರಣದಲ್ಲಿ ಯಾವುದೇ ಬೆವಿಕಂ/ಕೆಪಿಟಿಸಿಎಲ್ ವಿದ್ಯುತ್ ಮಾರ್ಗಗಳು ಹಾದು ಹೋಗುತ್ತಿದ್ದಲ್ಲಿ ಅವುಗಳನ್ನು ನೀವೇ ಬೆವಿಕಂ / ಕೆಪಿಟಿಸಿಎಲ್ ನಿಯಮಗಳಿಗೆ ಅನುಸಾರವಾಗಿ ನಿಮ್ಮ ಸ್ವಂತ ಖರ್ಚಿನಲ್ಲಿ ಸ್ಥಳಾಂತರಗೊಳಿಸುವುದು.
6. ಮೇಲ್ಕಂಡ ನಿಮ್ಮ ಆವರಣದಲ್ಲಿ, ಮುಂಬರುವ ದಿನಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಾಗ ನೀವು ಹಾಲಿ ಚಾಲ್ತಿಯಲ್ಲಿರುವ ಕರ್ನಾಟಕ ಕೆ.ಇ.ಆರ್.ಸಿ ನಿಬಂಧನೆಗಳನ್ನು ಮತ್ತು ವಿದ್ಯುತ್ ಸರಬರಾಜು ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ನಿಮ್ಮ ಆವರಣದಲ್ಲಿ ಬರುವ ವಿವಿಧ ಕಟ್ಟಡಗಳಿಗೆ ಬೆವಿಕಂ ನಿಯಮಗಳಿಗೆ ಅನುಸಾರವಾಗಿಯೇ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

8. ಈ ನಿರಾಕ್ಷೇಪಣಾ ಪತ್ರವನ್ನು ಭಾವಿ ಗ್ರಾಹಕರು ಬಿಡಿಎ/ಬಿಬಿಎಂಪಿ ಅಥವಾ ತತ್ಸಂಬಂಧ ಇಲಾಖೆಗಳಿಂದ ಬಹುಮಹಡಿ ಕಟ್ಟಡದ ಮಂಜೂರಾತಿ ನಕ್ಷೆ ಪಡೆಯಲು ನೀಡಲಾಗಿದೆ ವಿನಹ ಬೆವಿಕಂ ಯಾವುದೇ ವಿದ್ಯುತ್ ಮಂಜೂರಾತಿ ನೀಡಲು ಬದ್ಧವಾಗಿರುವುದಿಲ್ಲ. ವಿದ್ಯುತ್ ಕೋರಿಕೆಯನ್ನು ಆ ವೇಳೆಯಲ್ಲಿ ತಾಂತ್ರಿಕ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಿ ನೀಡಲಾಗುವುದು.

**ತಮ್ಮ ವಿಶ್ವಾಸಿ,**

**ಮುಖ್ಯ ಇಂಜಿನಿಯರ್ (ವಿ),**
**ಬೆಂಗಳೂರು ಮಹಾನಗರ ಕ್ಷೇತ್ರ ವಲಯ.,**